ಬದುಕಿನ ತೀವ್ರತೆಯನ್ನು ಉಕ್ಕಿಸುವ ಶಕ್ತಿ ಇರುತ್ತದೆ ಎಂಬುದನ್ನು ಮರೆಯುತ್ತಾರೆ. ಸಂಬಂಧಗಳ ಉನ್ನತಿಕೆಯನ್ನು ಸಾವಿನಂಥ ಮನುಷ್ಯನ ಕಟ್ಟ ಕಡೆಯ ಸತ್ಯದ ಬೆನ್ನಲ್ಲಿ ಅರಿಯುವ ಸಾಮರ್ಥ್ಯವನ್ನು ಪೂರ್ಣಿಮಾ ಅವರು ಕಳೆದುಕೊಂಡುಬಿಡುತ್ತಾರೆ. ಪ್ರೀತಿ, ನಂಬಿಕೆ ಇವು 'ದಟ್ಟತೆ'ಯನ್ನು ಪಡೆಯುವುದಿಲ್ಲ. 'ವಿನ್ನರ್ ವಿನ್ನರ್ ಚಿಕನ್ ಡಿನ್ನರ್'ನಂಥ ಕಥೆಯು 'ಸಮಸ್ಯೆಯನ್ನೇ' ಕೇಂದ್ರವಾಗಿಟ್ಟುಕೊಂಡು ಸಾಗುತ್ತದೆ. ಆಧುನಿಕತೆಯ ಹೆಸರಿನ ಪಬ್ಜಿ ಅಂಥ ಆಟಗಳು ಹೊಸದಾಗಿ ಪ್ರವೇಶಗೊಂಡರೂ ಅಲ್ಲಿನ ಪಾತ್ರಗಳು ತಮ್ಮನ್ನು ತಾವು ಅರ್ಥಮಾಡಿಕೊಂಡು ಬದುಕನ್ನು ವಿಸ್ತಾರಗೊಳಿಸಿಕೊಳ್ಳುವ ನಿಟ್ಟಿನಲ್ಲಿ ಕಥೆ ಮತ್ತಷ್ಟು ಪಕ್ವವಾಗಬೇಕಿತ್ತು ಅನಿಸುತ್ತದೆ. ಈ ಕಥೆಯ ಚಯನ್ ಮತ್ತು ಕಾವ್ಯಾ ಕಡಮೆ ಅವರ ಮಾಕೋ ಇಬ್ಬರೂ ಆಧುನಿಕತೆಯನ್ನೇ ಮೈಗೂಡಿಸಿಕೊಂಡಿರುವ ಅಡೋಲೆಸೆಂಟ್ ಯುವಕರು. ಇವರು ಪರಂಪರೆಯ ಭಯಕ್ಕಿಂತ ವೇಗದ ಬದುಕು ಒಡ್ಡುತ್ತಿರುವ ಸವಾಲುಗಳಿಗೆ ಒಗ್ಗಿಕೊಂಡಿದ್ದಾರೆ. ಇಂಥ ಕಡೆ ಇಬ್ಬರೂ ಕಥೆಗಾರರು ಹೊಸ ಬಗೆಯ 'ಸಂಘರ್ಷ'ಗಳನ್ನು ಅನಾವರಣ ಮಾಡಲು ಹೊರಡುತ್ತಾರೆ. ಈ ಬಗೆಯ ಸಂಘರ್ಷಗಳು ಭಾರತೀಯ ಯುವಕನ ಬದುಕಿನ ಸದ್ಯದ ತಾಕಲಾಟಗಳನ್ನು ಸಂಸ್ಕೃತಿಯ ಪ್ರಶ್ನೆಗಳನ್ನು ಎತ್ತುವಂತೆ ಮಾಡುತ್ತಿವೆ.

ಪೂರ್ಣಿಮಾ ಅವರ ಕೆಲ ಕಥೆಗಳಲ್ಲಿ ಹೆಣ್ಣುಜೀವಗಳು ಭಾವುಕತೆಗೆ ಜಾಗವೇ ಇಲ್ಲದಂತೆ ಮಾಡಿಕೊಳ್ಳುತ್ತಾರೆ. ಅವರ 'ಈಗೋ'ತನ ಎದ್ದು ಕಾಣುತ್ತದೆ. ಬಹುಶಃ, ಇದರ ದ್ವಂದ್ವದಲ್ಲಿ ಸರಿಯಾದ ಬದುಕಿನ ಲಯಗಳನ್ನು ಅರಿಯದೇ ಹೋಗುತ್ತಾರೆ. ಇಂಥ ಕಡೆ ಗಂಡುಲೋಕದ ಸಂಶಯವನ್ನು ಚೆನ್ನಾಗಿ ಹಿಡಿಯಬಲ್ಲರು. ಇನ್ನು ಕಥೆ ಕಟ್ಟಡಕ್ಕೆ ಬಂದಾಗ ಧಾರಾವಾಹಿ ತಂತ್ರವನ್ನೇ ಇವರು ಅನೇಕ ಕಥೆಗಳಲ್ಲಿ ಬಳಸುತ್ತಾರೆ. ಇವು ಕಥೆಗಳ ಗಾಂಭೀರ್ಯವನ್ನೇ ಕಸಿದಿವೆ. ಸಂಭಾಷಣೆಯೇ ಅಧಿಕಗೊಂಡರೇ ಅಲ್ಲಿ ಕೇವಲ ಭಾಷೆ ಇರುತ್ತದೆ. ಇದರಿಂದ ತಪ್ಪಿಸಿಕೊಂಡು ಕಥೆಯ ಸ್ವರೂಪವನ್ನು ಪಡೆದುಕೊಂಡಿರುವುದು 'ಜೀವದಾನ', ಮತ್ತು 'ವುಮನೈಸರ್' ಕಥೆಗಳು. ಒಂದು ಕಡೆ ಛಿದ್ರಗೊಂಡ ಸಂಬಂಧಗಳನ್ನು ಅರ್ಥಮಾಡಿಕೊಳ್ಳುವ ಮತ್ತು ಪರಸ್ಪರ ಒಗ್ಗೂಡುವ ನೆಪದಲ್ಲಿ 'ಜೀವದಾನ' ಮುಖ್ಯವಾಗುತ್ತದೆ. ಇನ್ನೊಂದು ಕಥೆಯಲ್ಲಿ ಸ್ವಗತಕ್ರಮವನ್ನು ಸಾವಿನ ಮೂಲಕವೇ ಹೇಳುವ ತಂತ್ರ ತಾಜಾ ಅನಿಸುತ್ತದೆ. ಪೂರ್ಣಿಮಾ ಅವರು ತಮಗೆ ದಕ್ಕಿರುವ ಸರಳವಾದ ಭಾಷಿಕ ನುಡಿಗಟ್ಟುಗಳನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳುವರೆಂಬ ಭರವಸೆಯಿದೆ. ವೈವಿಧ್ಯ ವಸ್ತುಗಳನ್ನು ಹುಡುಕುವ ತರಾತುರಿಯಲ್ಲಿ ಗಟ್ಟಿಯಾದ ಜೀವನದೃಷ್ಟಿಯನ್ನು ಮರೆತರೆ ಹೇಗೆ?. ಅನುಭವ ಜಗತ್ತು ಕೇವಲ ದೃಶ್ಯಗಳಾಗಿ ಬರಬಾರದು.

ಈ ಕಾಲಮಾನದ ದೃಷ್ಟಿಯಿಂದ ಹೆಣ್ಣು ತನ್ನ ಅಂತರಂಗವನ್ನೇ ನಂಬಿಕೊಂಡು ಬದುಕನ್ನು ಎದುರಿಸುವ ಮೂಲಕ ಗಂಡುಲೋಕವನ್ನು ಎದುರುಗೊಳ್ಳುವ ಮುಖ್ಯ ಕಥೆಯಾಗಿ ಅರ್ಪಣಾ ಎಚ್.ಎಸ್. ಅವರ 'ಹಿಪ್ಸ್ ಡೋಂಟ್ ಲೈ' ಕಾಣುತ್ತದೆ. ಏಕಕಾಲಕ್ಕೆ ಹೆಣ್ಣನ್ನು ವಿನಾ ಕಾರಣ ಪಕ್ಕಕ್ಕೆ ಜಾರಿಸುವ ಗೊಡ್ಡು ವೈದಿಕ ಕ್ರಮಗಳೂ ಮತ್ತು ಗಂಡುಲೋಕದಲ್ಲಿ ಇರುವ ಮಾನಸಿಕ ಸಂಶಯಗಳನ್ನು ಕಥೆಯ ಜಾನಕಿ ಎದುರಿಸುತ್ತಾಳೆ. ಶ್ರಾದ್ಧದ ಸಮಯದಲ್ಲಿ 'ಮಕ್ಕಳಾಗದ ಹೆಂಗಸರು ಮಡಿಗೆ ಬರಲ್ಲ ಕಣಮ್ಮ' ಎಂಬ ಭಟ್ಟರ ಮಾತಿಗೆ 'ಮಕ್ಕಳಾಗದೇ ಇರೋಕೆ ಕಾರಣ ಯಾರೋ ಅವರು ಅಡುಗೆ ಮಾಡಬಹುದೇ?' ಎಂಬ ಜಾನಕಿಯ ಮಾತುಗಳೇ ಕಥೆಯ ಇಡೀ ಧ್ವನಿಯನ್ನು ತೋರಿಸುತ್ತವೆ. ಪ್ರೀತಿಯನ್ನು ಒಳಗೊಂಡ ನಂಬಿಕೆಗೆ ಮುಕ್ತತೆಯೇ ಮೂಲ ಬೇರು; ಕೊನೆಗೆ ಅದೇ ಛಿದ್ರಗೊಳ್ಳುವ ಹಂತಕ್ಕೆ ತಲುಪುತ್ತದೆ. ಆಧುನಿಕತೆ ಅನ್ನುವುದಕ್ಕಿಂತ 'ಇಂದಿನ' ಜೀವನಶೈಲಿಯ ಮೇಲುವರ್ಗಗಳ ಆಂತರ್ಯ ಮತ್ತು ಹೆಣ್ಣಿನ ಒತ್ತಡಗಳನ್ನು ಕಥೆ ಸರಿಯಾಗಿ ಹಿಡಿದಿಟ್ಟಿದೆ. ಮತ್ತೊಂದು ವಿಚಾರವೆಂದರೆ, ಈ ಕಥೆ ಹೊಸ ಬಗೆಯಲ್ಲಿ ಹೆಣ್ಣಿನ ಒಳತೋಟಗಳನ್ನು ಅನಾವರಣ ಮಾಡಿದೆ. ಇವರ ಜೊತೆಯಲ್ಲಿ ಸೇರಿಸಬಹುದಾದ ಮತ್ತೊಂದು ಹೆಸರು ಛಾಯಾ ಭಟ್. ತೀರಾ ಸಂಪ್ರದಾಯಸ್ಥ ಕುಟುಂಬಗಳ ಒಳ-ಹೊರಗುಗಳನ್ನು ನಿರೂಪಿಸುತ್ತಲೇ, ಪಾತ್ರಗಳ ಮೂಲಕ ಜೀವನದರ್ಶನವನ್ನು ಗ್ರಹಿಸುವ ಕೆಲ ಕಥೆಗಳನ್ನು ಇವರು ಬರೆದಿದ್ದಾರೆ. ವೈದೇಹಿ ಅವರು ನಿರ್ಮಾಣ ಮಾಡಿರುವ ಪಾತ್ರಗಳ ನೆರಳು ಕಂಡರೂ, ತಟಕ್ಕನೇ ಸ್ವಂತಿಕೆಗೆ ಮರಳುವ ದಾರಿಯನ್ನು ಕಂಡುಕೊಳ್ಳುತ್ತಾರೆ. ಇದನ್ನು ಉಳಿಸಿಕೊಂಡರೇ ಮಾತ್ರ ಇವರೂ ಗಟ್ಟಿಯಾಗುತ್ತಾರೆ. ಅರ್ಪಣಾ ಅವರ ಮೇಲಿನ ಕಥೆಯ ಬಗ್ಗೆ ಬರೆಯುವಾಗಲೇ ಛಾಯಾ ಅವರ 'ಹೂಸು ಗಂಟು' ಎಂಬ ಕಥೆಯೂ ನೆನಪಾಗುತ್ತದೆ. ಈ ಕಥೆಯ ಪಾತ್ರಗಳು ಒಂದು ರೀತಿಯಲ್ಲಿ ತಮ್ಮನ್ನು ತಾವೇ 'ಕಳೆದುಕೊಳ್ಳುವ'